



## ಪ್ರಾಮಾಣಿಕ ಪ್ರಯತ್ನ

‘ಜೈ ಸಂವಿಧಾನ್’ (ಜ. 30, ರಘುನಾಥ ಚ.ಹ.) ಮುಖಪುಟ ಲೇಖನ, 76ನೇ ಗಣರಾಜ್ಯೋತ್ಸವ ಹಾಗೂ ಸಂವಿಧಾನದ ಅಮೃತ ಮಹೋತ್ಸವದ ನೆಪದಲ್ಲಿ ಭಾರತೀಯ ಸಂವಿಧಾನದ ಮಹತ್ವ ಹಾಗೂ ಅನನ್ಯತೆ ಕುರಿತು ಅತ್ಯಂತ ಅಪರೂಪದ ಮಾಹಿತಿಗಳನ್ನು ಒಳಗೊಂಡಿದೆ. ಸಂವಿಧಾನದ ಕುರಿತು ವಿವಿಧ ಕ್ಷೇತ್ರದವರ ಅಭಿಪ್ರಾಯಗಳು ಲೇಖನದ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿವೆ.

ವಿವಿಧ ಪ್ರದೇಶ, ಜಾತಿ, ಧರ್ಮ, ಭಾಷೆ ಇತ್ಯಾದಿಗಳಲ್ಲಿ ಹರಿದು ಹಂಚಿಹೋಗಿದ್ದ ದೇಶವನ್ನು ಒಂದುಗೂಡಿಸಿರುವ ಚಿನ್ನದ ದಾರದಂತಹ ನಮ್ಮ ಸಂವಿಧಾನ 75 ವರ್ಷಗಳನ್ನು ಪೂರೈಸಿ ದಾಪುಗಾಲಿಟ್ಟಿದೆ. ಇಷ್ಟು ವರ್ಷಗಳಲ್ಲಿ ನಮ್ಮ ಸಂವಿಧಾನ ಭಾರತೀಯರ ಜೀವನವನ್ನು ಪ್ರಭಾವಿಸಿರುವ ಮತ್ತು ಬದಲಿಸಿರುವ ಪರಿ ಅದ್ಭುತ ಹಾಗೂ ಅಗಾಧ.

ಇದೇ ಸಂದರ್ಭದಲ್ಲಿ ದೇವರು, ಧರ್ಮ, ಸಂಪ್ರದಾಯ, ಸಂಸ್ಕೃತಿ ಇವುಗಳ ಹೆಸರಿನಲ್ಲಿ ದೇಶದ ಜನರ ನಡುವಿನ ಏಕತೆಗೆ ಮತ್ತು ಅಭಿವೃದ್ಧಿಗೆ ಅಡ್ಡಗಾಲಾಗುತ್ತಿರುವ ಘಾತುಕ ಶಕ್ತಿಗಳು ಎಂದಿಗಿಂತ ಪ್ರಬಲವಾಗಿರುವುದು ಆತಂಕಕಾರಿ ವಿಷಯ. ಈ ಅಪಾಯಗಳ ಬಗ್ಗೆ ಗಮನಸೆಳೆಯುತ್ತಲೇ ಈ ಲೇಖನ ಜಾಗೃತಿ ಮೂಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದೆ.

—ಶಿವರಾಜು ಎ.ಆರ್., ಕೊರಟಗೆರೆ

## ಸಂವಿಧಾನದ ಅರಿವು

ಜನಸಾಮಾನ್ಯರಿಗೆ ಅರಿವು ಮೂಡಿಸುವಂಥ ಲೇಖನ, ಸಂವಿಧಾನದ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದೆ. ವಿವಿಧ ವರ್ಗದ ಜನರ ಅಭಿಪ್ರಾಯಗಳು ಕೂಡ ಚೆನ್ನಾಗಿವೆ. ಭಾರತದ ಸಂವಿಧಾನ ಕರ್ತೃಗಳಿಗೆ ನಮನ.

—ಶಶಿಧರ ಎಲೆ, ಬೆಂಗಳೂರು

## ವಿಚಾರಪೂರ್ಣ

ಅತ್ಯಂತ ವಿಚಾರಪೂರ್ಣ ಲೇಖನ. ಪ್ರಗತಿಪರ ಉದಾಹರಣೆಯೊಂದಿಗೆ ಆರಂಭವಾದ ಬರಹ, ದೇಶದ ಸಮಸ್ತರನ್ನೂ ಸ್ವಾಭಿಮಾನಿಗಳಾಗಿ ಬದುಕಲು ಸಂವಿಧಾನ ಹೇಗೆ ಕಲಿಸುತ್ತದೆ ಎಂಬುದನ್ನು ಪುಟ್ಟ ಪುಟ್ಟ ಪದಗಳ, ಪದಪುಂಜಗಳ ಮೂಲಕವೇ ಪರಿಣಾಮಕಾರಿಯಾಗಿ ತಿಳಿಸಿದೆ.

—ವಿಶ್ವೇಶ್ವರ ಗಾಯತ್ರಿ, ಬೆಂಗಳೂರು

## ಚಿಂತನೆಗೆ ಹಚ್ಚಿದ ಬರಹ

ಸಂವಿಧಾನದ ಕುರಿತಂತೆ ಸರಳವಾಗಿ ತಿಳಿವಳಿಕೆ ನೀಡಿದ ಲೇಖನ. ಸಂವಿಧಾನದ ಪ್ರಮುಖ ಅಂಶಗಳನ್ನು ಸ್ಪಷ್ಟವಾಗಿ ವಿವರಿಸುತ್ತಾ, ಹೊಸ ಮಾಹಿತಿ ಕಲಿಯಲು ಸಹಾಯ ಮಾಡಿತು. ದೈನಂದಿನ ಜೀವನಕ್ಕೆ ಸಂವಿಧಾನ ಹೇಗೆ ಪ್ರಸ್ತುತ ಎಂಬುದರ ಬಗ್ಗೆ ಚಿಂತನೆಗೆ ಹಚ್ಚಿತು. ಶಿಕ್ಷಣ ಸಂಸ್ಥೆಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಉಪಯುಕ್ತ.

—ಮೊಹಮದ್ ಸುಲೇಮಾನ್

## ಉತ್ತಮ ಕೊಡುಗೆ

ಗಣರಾಜ್ಯೋತ್ಸವಕ್ಕೆ ಒಳ್ಳೆಯ ಕೊಡುಗೆ. ಸಂವಿಧಾನ ಭಾರತೀಯರಿಗೆ ನೀಡಿರುವ ಹಕ್ಕುಗಳ ಬಗ್ಗೆ ಹಲವರ ಅನಿಸಿಕೆಗಳು ‘ಸಂವಿಧಾನದ ಸಾರ್ವಭೌಮತ್ವ’ದ ಪರಿಚಯ ಮಾಡಿಕೊಡುತ್ತವೆ. ನಮ್ಮನ್ನು ಎಚ್ಚರಿಸುವ ಒಂದು ಉತ್ತಮ ಲೇಖನವಿದು. ಅಂಬೇಡ್ಕರ್ ಅವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲೇಬೇಕು.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಸಂವಿಧಾನವೆಂಬ ಶಕ್ತಿ

ಸಂವಿಧಾನದ ಬಗ್ಗೆ ಸಮಗ್ರ ಮಾಹಿತಿ ನೀಡಿದ ಸಮಯೋಚಿತ ಲೇಖನ. ಸಾಮಾನ್ಯರನ್ನು ಮುನ್ನಡೆಸುವ ಶಕ್ತಿಯೇ ಸಂವಿಧಾನ ಎನ್ನುವುದನ್ನು ಫಲಾನುಭವಿ ಸಾಧಕರು ಲೇಖನದುದ್ದಕ್ಕೂ ದಾಖಲಿಸಿದ್ದಾರೆ.

—ದುಂಡಪ್ಪ ನಂದೆನ್ನವರ, ಬೆಳಗಾವಿ

## ಬಾಲ್ಯ ನೆನಪಾಯಿತು

‘ಕರಡಿಯ ಕುಣಿಸುತ’ (ಜ. 30, ವಾಸುದೇವ ಶರ್ಮಾ ಎನ್.ವಿ.) ಸುಂದರ ಕಥೆ. ನನಗೆ ನನ್ನ ಬಾಲ್ಯದ ದಿನಗಳನ್ನು ನೆನಪಿಸಿತು.

ಸಣ್ಣವರಿದ್ದಾಗ ದೊಂಬರಾಟ, ಕರಡಿ ಕುಣಿತ, ಕೋತಿ ಆಡಿಸುವುದು ಮುಂತಾದ ಅನೇಕ ಆಟಗಳನ್ನು ನೋಡಿದ್ದೆ. ದೊಂಬರಾಟವಂತೂ ಸುಮಾರು 2–3 ಗಂಟೆಗಳ ಕಾಲ ನಡೆಯುತ್ತಿತ್ತು. ಮಕ್ಕಳಾದ ನಮಗೆಲ್ಲಾ ಭರಪೂರ ಮನರಂಜನೆ.

ಈಗ ಈ ಆಟಗಳು ಕಳೆದುಹೋಗಿವೆ, ಕಾರಣ ಸರ್ಕಾರದ ಹಾಗೂ ಪ್ರಾಣಿ ದಯಾಸಂಘದ ಕಟ್ಟುನಿಟ್ಟು. ಕಥೆಯಲ್ಲಿ, ಕರಡಿಯ ಕುಣಿತವನ್ನೇ ನಂಬಿದ್ದ ನರಸಪ್ಪನ ಕರಡಿಯನ್ನು ಸರ್ಕಾರ ವಶಪಡಿಸಿಕೊಂಡದ್ದು, ನರಸಪ್ಪನಂತಹ ಮುಗ್ಧರಿಗೆ ಶಿಕ್ಷೆ ಆಗಿದ್ದು ಬೇಸರವಾಯಿತು.



—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ಇತಿಹಾಸ ಕಲಿಸೀತೇ ಪಾಠ?

‘ಶೂಸ್ ಆನ್ ದಿ ಡ್ಯಾನ್ಯೂಬ್ ಬ್ಯಾಂಕ್– ಇತಿಹಾಸದ ಕ್ರೂರ ಪುಟ’ (ಜ. 30, ಕೋಟೂರ್ ಸಂಪತ್) ಲೇಖನ ಮಾನವನ ಕ್ರೂರತೆಯ ಕರಾಳ ದರ್ಶನ ಮಾಡಿಸಿತು. ಸತ್ತವರ ವಸ್ತುಗಳನ್ನೂ ಬಿಡದೆ ಅವುಗಳನ್ನು ಮಾರಾಟ ಮಾಡಿ ಹಣ ಮಾಡಿಕೊಂಡಿದ್ದವರ ಮನಸ್ಥಿತಿಯನ್ನು ಓದಿ ಮನಸ್ಸು ಮಮ್ಮಲ ಮರುಗಿತು. ನೆಲದ ಮೇಲಿನ ಆಸೆ, ಯುದ್ಧ ದಾಹ, ಧರ್ಮಾಂಧತೆ ಇವೇ ಮೊದಲಾದವುಗಳೇ ಇಂಥ ಕುಕೃತ್ಯಗಳಿಗೆ ಕಾರಣ ಎಂಬ ಸತ್ಯಗಳು ಎಲ್ಲರಿಗೂ ಗೊತ್ತಿದ್ದರೂ, ಮತ್ತದೇ ಸಣ್ಣತನ ಮಾತ್ರ ಈಗಲೂ ಜಗದೆಲ್ಲೆಡೆ ಮುಂದುವರೆದಿರುವುದು ನೋವಿನ ಸಂಗತಿ.

—ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

## ದುರಂತದ ಹಿನ್ನೆಲೆ

ಕ್ಯಾಲಿಫೋರ್ನಿಯಾ; ಅಮೆರಿಕದ ಲಾಕ್ಷಾಗೃಹ (ಜ. 30, ರಹಮತ್ ತರೀಕೆರೆ) ಪ್ರವಾಸ ಕಥನ ಸಂದರ್ಭೋಚಿತವಾಗಿದೆ. ವಿಶ್ವಪ್ರಸಿದ್ಧ ನಗರ ಕ್ಯಾಲಿಫೋರ್ನಿಯಾದಲ್ಲಿ ಕಾಡ್ಗಿಚ್ಚು ಹಬ್ಬಿರುವ ದುರಂತದ ಹಿನ್ನೆಲೆಯನ್ನು ಬಿಡಿಸಿಡಲಾಗಿದೆ.

—ಚೇತನಾ, ಮೈಸೂರು

## ಸುಂದರ ಚಿತ್ರಗಳು

ಜನವರಿ 30ರ ಸಂಚಿಕೆಯಲ್ಲಿ ‘ನೀವು ಕೇಳಿದಿರಿ?’ ವಿಭಾಗದಲ್ಲಿ ಪ್ರಕಟಿಸಿರುವ ಶಶಿಧರ್ ಅವರ ಚಿತ್ರಗಳು ಬಹಳ ಚೆನ್ನಾಗಿವೆ. ಸೀತೆಯ ಚಿತ್ರವಂತೂ ತುಂಬಾ ಸುಂದರವಾಗಿದೆ.

—ವೀಣಾ, ಬೆಂಗಳೂರು

## ನನ್ನ ಕಸರತ್ತು ಕೂಡ

‘ಕಮ್ಲೂವಿನ ಕನ್ಯಾನ್ವೇಷಣೆ ಕಸರತ್ತು’ (ಜ. 23, ವೈ.ಕೆ. ಸಂಧ್ಯಾ ಶರ್ಮ) ‘ಮಂದಹಾಸ’ ಲೇಖನ, ಖಂಡಿತ ವಾಸ್ತವ. ಒಂದು ಹುಡುಗನ ತಾಯಿಯಾಗಿ ಇದೇ ಪರಿಸ್ಥಿತಿಯನ್ನು ನಾನು ಅನುಭವಿಸುತ್ತಿದ್ದೇನೆ.

—ವೀಣಾ ಕೆ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in